
## ನಿಮ್ಮ ವಿಮಾ ಕಂಪೆನಿಯು
## ನಿಮ್ಮ ದೂರುಗಳಿಗೆ ಕಿವಿಗೋಡುತ್ತಿದೆಯೇ ?



ನಿಮ್ಮ ವಿಮಾ ಕಂಪೆನಿಯು ನಿಮ್ಮ ದೂರುಗಳನ್ನು

ಐಆರ್‌ಡಿಎ ಗ್ರಿವೆನ್ಸ್ ಕಾಲ್ ಸೆಂಟರ್
ನಿ:ಶುಲ್ಕ ನಂ : 155255

ನಿಮ್ಮ ದೂರನ್ನು ನೋಂದಾಯಿಸಿಕೊಳ್ಳಲು ಮತ್ತು ಅದರ ತಾಜಾ ಸ್ಥಿತಿಯನ್ನು
ತಿಳಿದುಕೊಳ್ಳಲು ನೀವು ಇಲ್ಲಿ ನಮಗೆ ಇಮೈಲ್ ಮಾಡಬಹುದು www.igms.irda.gov.in

A public awareness initiative by
ಇವರಿಂದ ಒಂದು ಸಾರ್ವಜನಿಕ ಜಾಗೃತಿ ಉಪಕ್ರಮ
INSURANCE REGULATORY AND
DEVELOPMENT AUTHORITY
*Promoting insurance. Protecting insured.*
www.irdaindia.org

ಇವರಿಂದ ಒಂದು ಸಾರ್ವಜನಿಕ ಜಾಗೃತಿ ಉಪಕ್ರಮ
INSURANCE REGULATORY AND
DEVELOPMENT AUTHORITY

Bima Bemisaal




# ಮೋಟರ್ ವಿಮೆಯ
# ಬಗ್ಗೆ ಕೈಪಿಡಿ

**ಪರಿವಿಡಿಗಳು :**


| | |
|---|---|
| 1. ಈ ಕೈಪಿಡಿಯ ಬಗ್ಗೆ | 1 |
| 2. ಮೋಟರ್ ವಿಮೆ | 2 |
| 3. ಆಗಾಗ ಕೇಳಲಾಗುವ ಪ್ರಶ್ನೆಗಳು | 5 |
| 4. ಪಾಲಿಸಿಧಾರಕರ ಸೇವೆಗಳ ಟಿಎಟಿಗಳು | 14 |
| 5. ನಿಮ್ಮಲ್ಲಿ ದೂರುಗಳಿದ್ದರೆ | 15 |


**ಅನಂಗೀಕಾರ:**

ಈ ಕೈಪಿಡಿಯು ನಿಮಗೆ ಸಾಮಾನ್ಯ ಮಾಹಿತಿಯನ್ನು ಮಾತ್ರ ನೀಡುವ ಉದ್ದೇಶವನ್ನು ಹೊಂದಿದೆ ಮತ್ತು ಇದು ಎಲ್ಲವನ್ನೂ ಒಳಗೊಂಡಿಲ್ಲ. ಇದೊಂದು ಶೈಕ್ಷಣಿಕ ಉಪಕ್ರಮವಾಗಿದೆ ಮತ್ತು ಯಾವುದೇ ಕಾನೂನು ಸಲಹೆಯನ್ನು ನೀಡುವ ಉದ್ದೇಶವನ್ನು ಹೊಂದಿಲ್ಲ.

ಐಆರ್‌ಡಿಎ ಉಚಿತವಾಗಿ ನಿಮ್ಮ ದೂರುಗಳನ್ನು ವಿಮಾ ಕಂಪೆನಿಗಳ ವಿರುದ್ಧ ನೋಂದಾಯಿಸಿಕೊಳ್ಳುತ್ತದೆ ಹಾಗೂ ಅದರ ಸ್ಥಿತಿಯನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಕಾಲ್ ಸೆಂಟರ್ ಕರೆಯ ಆಧಾರದಲ್ಲಿ ದೂರು ಫಾರ್ಮ್‌ನ್ನು ತುಂಬಿಸಲು ಸಹಾಯ ಮಾಡುತ್ತದೆ ಆವಶ್ಯಕವಾದಾಗಲೆಲ್ಲ ಅದು ವಿಮಾ ಕಂಪೆನಿಯ ವಿಳಾಸ, ಟೆಲಿಫೋನ್ ಕ್ರಮಾಂಕ, ವೆಬ್‌ಸೈಟ್ ವಿವರಗಳು , ಸಂಪರ್ಕ ನಂಬರ್, ಇ-ಮೈಲ್ ಇವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡುವ ಮೂಲಕ ನೇರವಾಗಿ ಮೊದಲಿಗೆ ದೂರುಗಳನ್ನು ಸಲ್ಲಿಸುವ ಸೌಲಭ್ಯವನ್ನು ಒದಗಿಸುತ್ತದೆ. ಐಆರ್‌ಡಿಎ ಕಾಲ್‌ಸೆಂಟರ್ ಸೋಮವಾರದಿಂದ ಶನಿವಾರದ ತನಕ ಬೆಳಿಗ್ಗೆ ಗಂಟೆ 8 ರಿಂದ ರಾತ್ರಿ ಗಂಟೆ 8 ರ ತನಕ ಹಿಂದಿ, ಇಂಗ್ಲಿಷ್ ಮತ್ತು ವಿವಿಧ ಭಾರತೀಯ ಭಾಷೆಗಳಲ್ಲಿ 12 ತಾಸು X 6 ದಿನಗಳು ಸೇವಾ ವೇದಿಕೆಯ ಮೂಲಕ ವಾಸ್ತವಿಕ ಪರ್ಯಾಯ ಮಾಧ್ಯಮವನ್ನು ಪ್ರಸ್ತಾವಿತರಿಗೆ ಮತ್ತು ಪಾಲಿಸಿಧಾರಕರಿಗೆ ಸಮಗ್ರ ಕಾರ್ಯ ಸೌಲಭ್ಯವನ್ನು ಒದಗಿಸುತ್ತದೆ.

ಐಆರ್‌ಡಿಎಯಲ್ಲಿ ಒಂದು ದೂರನ್ನು ದಾಖಲಿಸಿದಾಗ, ಅದು ವಿಮಾ ಕಂಪೆನಿಯೊಂದಿಗೆ ಅದರ ನಿವಾರಣೆಗಾಗಿ ಪ್ರಯತ್ನಿಸುತ್ತದೆ. ದೂರನ್ನು ನಿವಾರಿಸಲು ಕಂಪೆನಿಗೆ 15 ದಿನಗಳನ್ನು ನೀಡಲಾಗುತ್ತದೆ. ಅವಶ್ಯಕ ಎಂದಾದರೆ, ಐಆರ್‌ಡಿಎಯು ತನಿಖೆಗಳನ್ನು ಮತ್ತು ವಿಚಾರಣೆಗಳನ್ನು ಮಾಡುತ್ತದೆ. ಅಲ್ಲದೆ, ಅನ್ವಯವಾಗುವಲ್ಲೆಲ್ಲಾ, ರಿಡ್ರೆಸ್ಸಲ್ ಆಫ್ ಪಬ್ಲಿಕ್ ಗ್ರಿವೆನ್ಸಸ್ ರೂಲ್ಸ್ 1998 ರ ಪ್ರಕಾರ ದೂರು ನೀಡಿದವರನ್ನು ವಿಮಾ ಒಂಬುಡ್ಸ್‌ಮೆನ್‌ರನ್ನು ಸಂಪರ್ಕಿಸಲು ಸಲಹೆ ನೀಡುತ್ತದೆ.



## 1. ಈ ಕೈಪಿಡಿಯ ಬಗ್ಗೆ

ಈ ಕೈಪಿಡಿಯು **ಮೋಟರ್ ವಿಮೆಯ** ಬಗ್ಗೆ ಮಾರ್ಗದರ್ಶಕವಾಗಿ ಇನ್‌ಶೂರೆನ್ಸ್ ರೆಗ್ಯುಲೇಟರಿ ಆಂಡ್ ಡೆವಲಪ್‌ಮೆಂಟ್ ಅಥಾರಿಟಿ (ಐಆರ್‌ಡಿಎ) ಇವರಿಂದ ವಿನ್ಯಾಸಗೊಳಿಸಲ್ಪಟ್ಟಿದೆ ಮತ್ತು ಕೇವಲ ಸಾಮಾನ್ಯ ಮಾಹಿತಿಯನ್ನು ಮಾತ್ರ ನೀಡುತ್ತದೆ. ಇಲ್ಲಿ ನೀಡಲಾದ ಯಾವುದೇ ಮಾಹಿತಿಯು ವಿಮಾ ಪಾಲಿಸಿಯ ನಿಯಮ ಮತ್ತು ನಿಬಂಧನೆಗಳನ್ನು ಬದಲಾಯಿಸುವುದಿಲ್ಲ ಅಥವಾ ರದ್ದುಗೊಳಿಸುವುದಿಲ್ಲ.

ಪಾಲಿಸಿಯ ಬಗ್ಗೆ ನಿರ್ದಿಷ್ಟವಾದ ಮಾಹಿತಿ ಅಥವಾ ಇತರ ಯಾವುದೇ ಹೆಚ್ಚುವರಿ ಮಾಹಿತಿಗಾಗಿ ದಯವಿಟ್ಟು ಲೈಸನ್ಸ್ ಹೊಂದಿರುವ ಏಜೆಂಟರನ್ನಾಗಲೀ ಅಥವಾ ಬ್ರೋಕರರನ್ನಾಗಲ್ಲಿ ಅಥವಾ ಐಆರ್‌ಡಿಎಯಿಂದ ನೋಂದಾಯಿಸಲ್ಪಟ್ಟ ವಿಮಾ ಕಂಪೆನಿಯನ್ನಾಗಲೀ ಸಂಪರ್ಕಿಸಿರಿ.

## 2. ಮೋಟರ್ ವಿಮೆ.

- **ಮೋಟರ್ ವಿಮೆ ಎಂದರೆನು ?**

  ಮೋಟರ್ ವಿಮೆಯು ವಾಹನ ಮಾಲೀಕರಿಗೆ ಈ ಮುಂದಿನವುಗಳ ವಿರುದ್ಧ ಸಂರಕ್ಷಣೆ ನೀಡುತ್ತದೆ (i) ಅವನ/ಅವಳ ವಾಹನಕ್ಕೆ ಹಾನಿ ಮತ್ತು (ii) ವಾಹನದ ಮಾಲೀಕರ ವಿರುದ್ಧ ಕಾನೂನಿ ಪ್ರಕಾರ ನಿರ್ಧರಿಸಿದಂತೆ ಯಾವುದೇ ಮೂರನೇ ಪಾರ್ಟಿಯ ಬಾಧ್ಯತೆಯ ಸಲುವಾಗಿ ಪಾವತಿ ಮಾಡುತ್ತದೆ. ಮೂರನೇ ಪಾರ್ಟಿ ವಿಮೆಯು ಕಾನೂನು ಪ್ರಕಾರ ಆವಶ್ಯಕವಾಗಿದೆ. ವಾಹನದ ಮಾಲೀಕರು ಸಾರ್ವಜನಿಕ ಸ್ಥಳದಲ್ಲಿ ವಾಹನದ ಉಪಯೋಗದ ಕಾರಣದಿಂದಾದ ಮೂರನೇ ಪಾರ್ಟಿಗೆ ಆದ ಯಾವುದೇ ಆರೋಗ್ಯ ಹಾನಿ ಅಥವಾ ಜೀವಕ್ಕೆ ಅಥವಾ ಆಸ್ತಿಗೆ ಆದ ಹಾನಿಗೆ ಕಾನೂನು ಪ್ರಕಾರ ಬಾಧ್ಯರಾಗುತ್ತಾರೆ. ವಿಮೆ ಮಾಡಿಸಿಕೊಳ್ಳದೆ ಸಾರ್ವಜನಿಕ ಸ್ಥಳದಲ್ಲಿ ಮೋಟರ್ ವಾಹನವನ್ನು ಚಲಾಯಿಸುವುದು ಮೋಟರ್ ವೆಹಿಕಲ್ಸ್ ಕಾಯ್ದೆ 1988ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದೆ.

- **ಮೋಟರ್ ವಿಮಾ ಸುರಕ್ಷೆಯ ಪ್ರಕಾರಗಳು :**

  ವಿವರವಾಗಿ ಹೇಳುವುದಾದರೆ ಮೋಟರ್ ವಿಮಾ ಸುರಕ್ಷೆಯನ್ನು ಒದಗಿಸುವ ಎರಡು ಪ್ರಕಾರಗಳ ವಿಮೆಗಳಿವೆ :

  ಅ. ಲಯಬಿಲಿಟಿ ಓನ್ಲೀ ಪಾಲಿಸಿ (ಕಾನೂನು ಪ್ರಕಾರ ಆವಶ್ಯಕ)

  ಆ. ಪ್ಯಾಕೇಜ್ ಪಾಲಿಸಿ (ಲಯಬಿಲಿಟಿ ಓನ್ಲೀ ಪಾಲಿಸಿ + ಮಾಲೀಕರ ವಾಹನಕ್ಕೆ ಹಾನಿ, ಸಾಮಾನ್ಯವಾಗಿ ಓ.ಡಿ ಕವರ್ ಎಂದು ಕರೆಯಲಾಗುತ್ತದೆ).

  ನೀವು ಲಯಬಿಲಿಟಿ ಓನ್ಲೀ ಪಾಲಿಸಿಯನ್ನು ತೆಗೆದುಕೊಂಡರೆ ನಿಮ್ಮ ವಾಹನದ ಹಾನಿಯು ಒಳಗೊಂಡಿರುವುದಿಲ್ಲ ಎಂಬುದು ನೆನಪಿರಲಿ. ಆದ್ದರಿಂದ, ಪ್ಯಾಕೇಜ್ ಪಾಲಿಸಿ ತೆಗೆದುಕೊಳ್ಳುವುದು ಉತ್ತಮವಾಗಿದ್ದು ಇದು ನಿಮ್ಮ ವಾಹನಕ್ಕೆ ಸುರಕ್ಷೆಯ ಜೊತೆಗೆ ಹೆಚ್ಚಿನ ಸುರಕ್ಷೆಯನ್ನು ಒದಗಿಸುತ್ತದೆ.



## 5. ನಿಮ್ಮಲ್ಲಿ ದೂರುಗಳಿದ್ದರೆ

ಕನ್ಸ್ಯೂಮರ್ ಅಫೇರ್ಸ್ ಡಿಪಾರ್ಟ್ ಮೆಂಟ್ ಆಫ್ ಇನ್ ಶೂರೆನ್ಸ್ ರೆಗ್ಯುಲೇಟರಿ ಆಂಡ್ ಡೆವಲಪ್‌ಮೆಂಟ್ ಅಥಾರಿಟಿ (ಐಆರ್‌ಡಿಎ) ಇವರು ಸಮಗ್ರ ದೂರು ನಿರ್ವಹಣಾ ವ್ಯವಸ್ಥೆಯನ್ನು (ಐಜಿಎಮ್‌ಎಸ್) ಪರಿಚಯಿಸಿದ್ದು ಇದು ದೂರುಗಳ ನೋಂದಾವಣೆ ಮತ್ತು ಅದರ ತಾಜಾ ಸ್ಥಿತಿಯನ್ನು ತಿಳಿಯುವ ಒಂದು ಆನ್‌ಲೈನ್ ವ್ಯವಸ್ಥೆಯಾಗಿದೆ. ನೀವು ಮೊದಲಿಗೆ ನಿಮ್ಮ ದೂರನ್ನು ವಿಮಾ ಕಂಪೆನಿಯಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅದರ ನಿವಾರಣೆಯಿಂದ ನೀವು ತೃಪ್ತರಾಗದಿದ್ದರೆ ನೀವು ಅದನ್ನು www.igms.irda.gov.in ಇದನ್ನು ತಲಪುವ ಮೂಲಕ ಐಜಿಎಮ್‌ಎಸ್‌ನ ಮೂಲಕ ಐಆರ್‌ಡಿಎಗೆ ಕಳಹಿಸಬಹುದು. ನಿಮಗೆ ನೇರವಾಗಿ ಇನ್‌ಶೂರರ ದೂರು ವ್ಯವಸ್ಥೆಯನ್ನು ತಲಪಲು ಸಾಧ್ಯವಾಗದಿದ್ದರೆ, ಐಜಿಎಮ್‌ಎಸ್ ಇವರು ನಿಮ್ಮ ದೂರನ್ನು ವಿಮಾ ಕಂಪೆನಿಯಲ್ಲಿ ನೋಂದಾಯಿಸಿಕೊಳ್ಳುವ ಪರ್ಯಾಯ ವ್ಯವಸ್ಥೆಯನ್ನು ಮಾಡುತ್ತಾರೆ.

ಐಜಿಎಮ್‌ಎಸ್‌ನ ಮೂಲಕ ನಿಮ್ಮ ದೂರನ್ನು ದಾಖಲಿಸುವುದು ಮಾತ್ರವಲ್ಲದೆ (ಅಂದರೆ ವೆಬ್) ದೂರುಗಳನ್ನು ದಾಖಲಿಸಲು ನಿಮಗೆ ಅನೇಕ ಮಾಧ್ಯಮಗಳಿವೆ- ಇ - ಮೈಲ್‌ನ ಮೂಲಕ (complaints@irda.gov.in) ಪತ್ರದ ಮೂಲಕ (ನಿಮ್ಮ ಪತ್ರಗಳನ್ನು ಕ‌ನ್‌ಸ್ಯೂವರ್ ಅಫೇರ್ಸ್ ಡಿಪಾರ್ಟ್‌ಮೆಂಟ್, ಇನ್‌ಶೂರೆನ್ಸ್ ರೆಗ್ಯುಲೇಟರಿ ಆಂಡ್ ಡೆವಲಪ್‌ಮೆಂಟ್ ಅಥಾರಿಟಿ, 3 ನೇ ಮಹಡಿ, ಪರಿಶ್ರಮ್ ಭವನ, ಬಶೀರ್‌ಭಾಗ್, ಹೈದರಾಬಾದ್ : 4 ಇಲ್ಲಿಗೆ ಕಳುಹಿಸಿರಿ) **ಅಥವಾ ನಿ:ಶುಲ್ಕ ನಂ :** 155255 ಈ ನಿ:ಶುಲ್ಕ ನಂಬರ್‌ನಲ್ಲಿ ಐಆರ್‌ಡಿಎ ಕಾಲ್ ಸೆಂಟರ್‌ಗೆ ಕರೆ ಮಾಡಿರಿ, ಇದರ ಮೂಲಕ

## ಪಾಲಿಸಿಧಾರಕರಿಗೆ ಸೇವೆ ಸಲ್ಲಿಸಲು ಐಆರ್‌ಡಿಎ ಇವರಿಂದ ನಿಗದಿಗೊಳಿಸಲಾದ ತಗಲುವ ಸಮಯ

| ಸೇವೆ | ಗರಿಷ್ಠ ಸಮಯ |
|---|---|
| **ಸಾಮಾನ್ಯ** | |
| ಪ್ರಸ್ತಾವವನ್ನು ಪ್ರೊಸೆಸ್ ಮಾಡುವುದು ಆವಶ್ಯಕತೆ/ಪಾಲಿಸಿ ನೀಡಿಕೆ/ರದ್ದು ಪಡಿಸುವಿಕೆ ಯನ್ನೊಳನೊಂಡು ನಿರ್ಧಾರವನ್ನು ತಿಳಿಸುವುದು | 15 ದಿನಗಳು |
| ಪ್ರಸ್ತಾವದ ಪ್ರತಿಯನ್ನು ಪಡೆದುಕೊಳ್ಳುವುದು | 30 ದಿನಗಳು |
| ಪಾಲಿಸಿ ನೀಡಿದ ನಂತರದ ಸೇವೆ - ದೋಷ ಪ್ರಸ್ತಾವದ ಡಿಪಾಸಿಟ್‌ನ ಹಿಂತಿರುಗಿಸುವಿಕೆಯ ಬಗ್ಗೆ ಕೋರಿಕೆಗಳು ಮತ್ತು ನಾನ್-ಕ್ಲೈಮ್ ಸಂಬಂಧಿತ ಸೇವೆಗಳ ಕೋರಿಕೆಗಳು | 10 ದಿನಗಳು |
| **ಜೀವ ವಿಮೆ** | |
| ಸರಂಡರ್ ಮೌಲ್ಯ/ಆ್ಯನುಯಿಟಿ/ಪೆನ್ಶನ್ ಪ್ರೊಸೆಸ್ ಮಾಡುವುದು. | 10 ದಿನಗಳು |
| ಪರಿಪಕ್ವತೆಯ ಕ್ಲೈಮ್/ಸರ್ವೈವಲ್ ಲಾಭ ಪೆನಲ್ ಬಡ್ಡಿ ಪಾವತಿಸದಿರುದಂಥಾದ್ದು | 15 ದಿನಗಳು |
| ಕ್ಲೈಮ್‌ನ್ನು ಸಲ್ಲಿಸಿದ ನಂತರ ಕ್ಲೈಮ್‌ನ ಆವಶ್ಯಕತೆಗಳನ್ನು ತಿಳಿಸುವುದು | 15 ದಿನಗಳು |
| ತನಿಖೆಯ ಆವಶ್ಯಕತೆ ಇಲ್ಲದೆ ಮೃತ್ಯು ದಾವೆಗಳ ತೀರಿಕೆ | 30 ದಿನಗಳು |
| ತನಿಖೆಯ ಆವಶ್ಯಕತೆಯೊಂದಿಗೆ ಮೃತ್ಯುದಾವೆಯ ತೀರಣೆ/ನಿರಾಕರಕೆ | 6 ತಿಂಗಳು |
| **ಸಾಮಾನ್ಯ ವಿಮೆ** | |
| ಸರ್ವೆ ರಿಪೊರ್ಟ್ ಸಲ್ಲಿಕೆ | 30 ದಿನಗಳು |
| ಇನ್‌ಶೂರರು ಸೇರಿಕೆ ವರದಿಯನ್ನು ಕೋರುವುದು. | 15 ದಿನಗಳು |
| ಮೊದಲ/ಸೇರಿಕೆ ಸರ್ವೇ ರಿಪೋರ್ಟ್‌ನ್ನು ಪಡೆದ ನಂತರ ದಾವೆಯ ತೀರಿಕೆ /ತಿರಸ್ಕರಿಸುವಿಕೆ | 30 ದಿನಗಳು |
| **ದೂರುಗಳು** | |
| ದೂರಗಳ ಸ್ವೀಕೃತಿಯ ದಾಖಲಾತಿ | 3 ದಿನಗಳು |
| ದೂರಿನ ನಿವಾರಣೆ | 15 ದಿನಗಳು |



- **ಮೋಟರ್ ವಿಮೆಯು ಯಾವುದನ್ನು ಒಳಗೊಂಡಿರುತ್ತದೆ :**

  ಈ ಕೆಳಗಿನ ಅಪಾಯಗಳ ಕಾರಣ ವಾಹನಕ್ಕಾಗುವ ಹಾನಿಗಳು ಮೋಟರ್ ವಿಮಾ ಪಾಲಿಸಿಯ ಓಡಿ ವಿಭಾಗದಲ್ಲಿ ಸಾಮಾನ್ಯವಾಗಿ ಒಳಗೊಂಡಿರುತ್ತದೆ :

  ಅ. ಬೆಂಕಿ, ಸ್ಫೋಟ, ಸ್ವಯಂ - ಇಗ್ನೀಷನ್, ಮಿಂಚು

  ಆ. ಕಳವು/ಮನೆ ಕಳ್ಳತನ/ಕದಿಯುವಿಕೆ

  ಇ. ದೊಂಬಿ/ಮುಷ್ಕರ

  ಈ. ಭೂಕಂಪ

  ಉ. ನೆರೆ, ಬಿರುಗಾಳಿ, ಚಂಡ ಮಾರುತ, ಸುಳಿಗಾಳಿ, ಸುಂಟರ ಗಾಳಿ, ಮುಳುಗಡೆ, ಆಲಿಕಲ್ಲು ಮಳೆ, ಹಿಮ.

  ಊ. ಆಕಸ್ಮಿಕ ಬಾಹ್ಯ ಕಾರಣ

  ಋ. ದುರುದ್ದೇಶದ ಕೆಲಸ

  ಎ. ಭಯೋತ್ಪಾದನಾ ಕ್ರಿಯೆ

  ಏ. ರೈಲು/ರಸ್ತೆ, ಒಳಗಿನ ಜಲಮಾರ್ಗ, ಲಿಫ್ಟ್, ಎಲ ವೇಟರ್ ಅಥವಾ ವಿಮಾನ ಮೂಲಕ ಸಾಗಿಸುವಾಗ

  ಔ. ಭೂಕುಸಿತ/ಬಂಡೆಕುಸಿತ

- **ಮೋಟರ್ ವಿಮೆಯು ಯಾವುದನ್ನು ಹೊರತುಪಡಿಸುತ್ತದೆ :**

  ಈ ಕೆಳಗಿನ ಆಕಸ್ಮಿಕ ಘಟನೆಗಳನ್ನು ಸಾಮಾನ್ಯವಾಗಿ ಮೋಟರ್ ವಿಮಾ ಪಾಲಿಸಿಯಿಂದ ಹೊರತುಪಡಿಸಲಾಗುತ್ತದೆ.

- ಊರ್ಜಿತ ಡ್ರೈವಿಂಗ್ ಲೈಸನ್ಸ್ ಇಲ್ಲದಿರುವುದು.
- ಅಮಲು ಬರಿಸುವ ಮದ್ಯ/ಔಷಧಗಳ ಪ್ರಭಾವದಲ್ಲಿರುವುದು
- ಭೌಗೋಲಿಕ ಮಿತಿಯ ಹೊರಗಡೆ ಸಂಭವಿಸುವ ಅಪಘಾತ.
- ವಾಹನ ವನ್ನು ಅಕ್ರಮ ಉದ್ದೇಶಗಳಿಗಾಗಿ ಉಪಯೋಗಿಸಿದಾಗ
- ಇಲೆಕ್ಟ್ರಿಕಲ್.ಮೈಕ್ಯಾನಿಕಲ್ ಬ್ರೇಕ್ ಡೌನ್‌ಗಳು.

**ವಿಮೆ ಮಾಡಿಸಿಕೊಳ್ಳುವ ಮೊತ್ತದ ಆಧಾರ :**

ಸ್ವಂತ ಹಾನಿಗಾಗಿ :

ಮೋಟರ್ ವಿಮಾ ಪಾಲಿಸಿಯಡಿಯಲ್ಲಿನ ವಿಮಾ ಮೊತ್ತವು ವಿಮೆ ಮಾಡಿಸಿಕೊಂಡವರ ಘೋಷಿತ ಮೌಲ್ಯ ಎಂದು ತಿಳಿಯಲ್ಪಡುವ ಪರಿಕಲ್ಪನೆಯ ಆಧಾರದಲ್ಲಿ ನಿರ್ಧರಿಸಿದ ಮೋಟರ್ ವಾಹನದ ಮೌಲ್ಯವನ್ನು ಪ್ರತಿನಿಧಿಸುತ್ತದೆ. ವಿಮೆ ಮಾಡಿಸಿಕೊಂಡವರ ಘೋಷಿತ ಮೌಲ್ಯವನ್ನು ಉತ್ಪಾದಕರ ಪ್ರಸಕ್ತ ಮೌಲ್ಯ ಮತ್ತು ವಾಹನದ ವಯಸ್ಸಿನ ಆಧಾರದಲ್ಲಿ ಇಳಿತಾಯದ ಆಧಾರದಲ್ಲಿ ಲೆಕ್ಕ ಮಾಡಲಾಗುತ್ತದೆ.

ಕವರೇಜ್ ಮೋಟಾರ್ ವೆಹಿಕಲ್ಸ್ ಕಾಯ್ದೆ 1988ರ ಆವಶ್ಯಕತೆಯಂತೆ ಇರುತ್ತದೆ. ಮಾಲೀಕರು - ಚಾಲಕರ ಕಡ್ಡಾಯ ವೈಯಕ್ತಿಕ ಅಪಘಾತ ಸುರಕ್ಷೆಯನ್ನು ಕೂಡ ಒಳಪಡಿಸಲಾಗುತ್ತದೆ. ಕಾನೂನು ಪ್ರಕಾರ ಉಪಲಬ್ಧವಿರುವ ಸುರಕ್ಷೆಯಲ್ಲದೆ ವಾಹನದಲ್ಲಿ ಪ್ರಯಾಣಿಸುತ್ತಿರುವವರ ವೈಯಕ್ತಿಕ ಅಪಘಾತ, ವಾಹನ ಚಾಲಕರಿಗೆ ವರ್ಕ್‌ಮೆನ್ಸ್ ಕಂಪೆನ್ಸೇಷನ್ ಹೀಗೆ ಇವುಗಳನ್ನು ಒಳಪಡಿಸುವ ಸಲುವಾಗಿಯೂ ಪಾಲಿಸಿಯನ್ನು ವಿಸ್ತರಿಸಬಹುದು.



**ಪ್ರ : ಆರ್‌ಟಿಓದ ದಾಖಲೆಗಳಲ್ಲಿ ವಾಹನವನ್ನು ನನ್ನ ಹೆಸರಿಗೆ ವರ್ಗಾಯಿಸಲಾಗಿದ್ದರೂ, ನಾನು ಹಿಂದಿನ ಮಾಲೀಕರ ಹೆಸರಿನಲ್ಲಿ ವಿಮೆಯನ್ನು ಮುಂದುವರಿಸಬಹುದೇ ?**

ಉ : ಇಲ್ಲ. ವಾಹನದ ನೋಂದಾವಣೆ ಮತ್ತು ವಿಮೆಯು ಯಾವಾಗಲೂ ಒಂದೇ ಹೆಸರು ಮತ್ತು ಒಂದೇ ವಿಳಾಸದ್ದಾಗಿರಬೇಕು. ಇಲ್ಲದಿದ್ದರೆ ದಾವೆಯನ್ನು ಪಾವತಿಸಲಾಗುವುದಿಲ್ಲ. ಒಂದು ಹೊಸ ಪ್ರಸ್ತಾವ ಫಾರ್ಮನ್ನು ತುಂಬಿಸಬೇಕು. ವಿಮೆಯ ವರ್ಗಾವಣೆಗೆ ಒಂದು ಮಾಮೂಲಿ ಫೀಯನ್ನು ವಿಧಿಸಲಾಗುತ್ತದೆ.

**ಪ್ರ : ನನ್ನ ವಿಮಾ ಪಾಲಿಸಿ ಕಳೆದು ಹೋಗಿದೆ. ನಾನು ನಕಲು ಪ್ರತಿಯನ್ನು ಪಡೆಯಬಹುದೇ ?**

ಉ : ಹೌದು, ದಯವಿಟ್ಟು ಲಿಖಿತ ಕೋರಿಕೆಯೊಂದಿಗೆ ಪಾಲಿಸಿಯನ್ನು ನೀಡಿದ ಅದೇ ಕಚೇರಿಯನ್ನು ಸಂಪರ್ಕಿಸಿರಿ. ನಕಲು ಪಾಲಿಸಿ ಪ್ರತಿಯನ್ನು ನೀಡಲು ಒಂದು ಮಾಮೂಲಿ ಫೀಯನ್ನು ವಿಧಿಸಲಾಗುತ್ತದೆ.

**ಪ್ರ : ಮೋಟರ್ ವಿಮಾ ದಾವೆಗಾಗಿ ಸಲ್ಲಿಸಬೇಕಾದ ದಸ್ತಾವೇಜುಗಳಾವುವು ?**

ಉ : ಸಾಮಾನ್ಯವಾಗಿ ಈ ಕೆಳಗಿನ ದಸ್ತಾವೆಜುಗಳನ್ನು ಸಲ್ಲಿಸಬೇಕಾಗುತ್ತದೆ. ಆದಾಗ್ಯೂ, ಸಂಪೂರ್ಣ ಪಟ್ಟಿ ಗಾಗಿ ನಿಮ್ಮ ಪಾಲಿಸಿಯನ್ನು ನೋಡಿರಿ- ಸರಿಯಾಗಿ ತುಂಬಿಸಿದ ದಾವೆ ಫಾರ್ಮ್, ವಾಹನದ ಆರ್‌ಸಿ ಪ್ರತಿ, ನಷ್ಟದ ಅಂದಾಜಿನ ಮೂಲ ಪ್ರತಿ, ಮೂಲ ರಿಪೇರ್ ಇನ್ವಾಯ್ಸ್ ಮತ್ತು ಹಣಪಾವತಿ ರಸೀದಿ. ಒಂದು ವೇಳೆ ನಗದು ರಹಿತ ಸೌಲಭ್ಯವು ಉಪಲಬ್ಧವಿದ್ದರೆ, ಕೇವಲ ರಿಪೇರಿ ಇನ್ವಾಯ್ಸನ್ನು ಮತ್ತು ಆವಶ್ಯಕವಾದರೆ ಎಫ್‌ಐ ಆರ್‌ನ್ನು ಸಲ್ಲಿಸಬೇಕು. ಕಳವಿನ ದಾವೆಗಾಗಿ ಕೀಗಳನ್ನು ಸಲ್ಲಿಸಬೇಕು. ಕಳವಿನ ದಾವೆಗಾಗಿ ನಾನ್ ಟ್ರೇಸಿಯೇಬಲ್ ಸರ್ಟಿಫಿಕೇಟನ್ನು ಕೂಡಾ ಸಲ್ಲಿಸಬೇಕು.

ಆರ್‌ಟಿಒಗೆ ತಿಳಿಸಬೇಕು. ''ಒಡಿ'' ವಿಭಾಗ ಮತ್ತು ''ಟಿಪಿ'' ವಿಭಾಗದಡಿಯಲ್ಲೂ ಕೂಡಾ ಕಿಟ್‌ನ ಮೌಲ್ಯದ ಮೇಲೆ ಹೆಚ್ಚುವರಿ ಪ್ರೀಮಿಯಂ ಪಾವತಿಯಲ್ಲಿ ಕಿಟ್‌ನ ಸುರಕ್ಷೆಯ ಸಲುವಾಗಿ ವಿಮಾ ಕಂಪೆನಿಗೂ ತಿಳಿಸಬೇಕು.

**ಪ್ರ : ಸಾರ್ವಜನಿಕ ಜಾಗಗಳಲ್ಲಿ ಸಾಗುವಾಗ ವಾಹನದಲ್ಲಿ ಇರಿಸಿಕೊಳ್ಳಬೇಕಾದ ದಸ್ತಾವೇಜುಗಳಾವುವು ?**

ಉ :
- ಸರ್ಟಿಫಿಕೇಟ್ ಆಫ್ ಇನ್‌ಶೂರೆನ್ಸ್
- ನೋಂದಾವಣೆ ಸರ್ಟಿಫಿಕೇಟ್‌ನ ಝೆರಾಕ್ಸ್ ಪ್ರತಿ
- ಪೊಲ್ಯೂಷನ್ ಅಂಡರ್ ಕಂಟ್ರೋಲ್ ಸರ್ಟಿಫಿಕೇಟ್
- ವಾಹನವನ್ನು ಚಲಾಯಿಸುವ ವ್ಯಕ್ತಿಯ ಡಿಎಲ್‌ನ ಪ್ರತಿ.

**ಪ್ರ : ನಾನು ನನ್ನ ವಿಮೆಯನ್ನು ನನ್ನ ವಾಹನವನ್ನು ಖರೀದಿ ಮಾಡುವವರಿಗೆ ವರ್ಗಾಯಿಸಬಹುದೇ ?**

ಉ : ಹೌದು, ಮಾರಾಟ ಮಾಡುವವರು ಇಂತಹ ವರ್ಗಾವಣೆಯನ್ನು ಲಿಖಿತ ಮೂಲಕ ವಿಮಾ ಕಂಪೆನಿಗೆ ತಿಳಿಸಿದಲ್ಲಿ ವಿಮೆಯನ್ನು ವಾಹನವನ್ನು ಖರೀದಿಸುವವರಿಗೆ ವರ್ಗಾಯಿಸಬಹುದು. ಒಂದು ಹೊಸ ಪ್ರಸ್ತಾವ ಫಾರ್ಮನ್ನು ತುಂಬಿಸಬೇಕು. ವರ್ಗಾವಣೆಯ ತಾರೀಖಿನಿಂದ ಪಾಲಿಸಿ ಮುಕ್ತಾಯದ ತನಕ ಎನ್‌ಸಿಬಿಯ ಪ್ರಮಾಣಾನುಸಾರ ವಸೂಲಿಯೊಂದಿಗೆ ಮಾಮೂಲಿ ವರ್ಗಾವಣೆ ಫೀಯನ್ನು ವಿಧಿಸಲಾಗುತ್ತದೆ. ಕಾಂಪ್ರಹೆನ್ಸಿವ್ / ಪ್ಯಾಕೇಜ್ ಪಾಲಿಸಿಗಳಲ್ಲಿ ಮಾಲಕತ್ವದ ವರ್ಗಾವಣೆಯನ್ನು ವರ್ಗಾವಣೆ ತಾರೀಖಿನಿಂದ 14 ದಿನಗಳೊಳಗೆ ದಾಖಲಿಸಬೇಕಾಗಿದ್ದು ಇದಕ್ಕೆ ತಪ್ಪಿದಲ್ಲಿ ವಾಹನಕ್ಕೆ ಆಗುವ ಸ್ವಂತ: ಹಾನಿಗಾಗಿ ದಾವೆಯನ್ನು ಪಾವತಿಸಲಾಗುವುದಿಲ್ಲ ಎಂಬುದನ್ನು ಗಮನಿಸಬೇಕು.



## 3. ಮೋಟರ್ ವಿಮೆಯ ಬಗ್ಗೆ ಆಗಾಗ ಕೇಳಲಾಗುವ ಪ್ರಶ್ನೆಗಳು

**ಪ್ರ : ನಾನು ಯಾವ ಮೋಟರ್ ವಿಮೆಯನ್ನು ಖರೀದಿಸಬೇಕು ? ನಾನು ಕಾಂಪ್ರಹೆನ್ಸಿವ್ ವಿಮೆಯನ್ನು ಖರೀದಿಸಬೇಕೇ ಅಥವಾ ಲಯಬಿಲಿಟಿ ಓನ್ಲೀ ಪಾಲಿಸಿಯನ್ನು ಖರೀದಿಸಬೇಕೇ ?**

ಉ : ಭಾರತದಲ್ಲಿ ಸಾರ್ವಜನಿಕ ರಸ್ತೆಯಲ್ಲಿ ಸಾಗುವ ಎಲ್ಲಾ ವಾಹನಗಳಿಗೂ ಮೂರನೇ ಪಾರ್ಟಿ ಲಯಬಿಲಿಟಿ ವಿಮೆಯು ಕಡ್ಡಾಯವಾಗಿದೆ. ಇದು ನೀವು ಜವಾಬ್ದಾರರಾಗಿದ್ದು ಇತರಿಗಾಗುವ ಘಾಸಿಗಳು ಮತ್ತು ಹಾನಿಗಳ ಬಾಧ್ಯತೆಗೆ ಸುರಕ್ಷೆಯನ್ನು ನೀಡುತ್ತದೆ. ಅಲ್ಲದೆ ಕಾಂಪ್ರಹೆನ್ಸಿವ್ / ಪ್ಯಾಕೇಜ್ ಪಾಲಿಸಿಯ ಮೂಲಕ ಸ್ವತ: ವಾಹನಕ್ಕಾಗುವ ನಷ್ಟ ಅಥವಾ ಹಾನಿಯ ಸುರಕ್ಷೆ ಪಡೆಯುವುದೂ ಉತ್ತಮವಾಗಿದ್ದು ಇದು ''ಬಾಧ್ಯತೆ'' ಹಾಗೂ ವಿಮೆ ಮಾಡಿಸಿಕೊಂಡಿರುವ ವಾಹನದ ''ಸ್ವಂತ ಹಾನಿಯನ್ನು'' ಒಳಗೊಂಡಿರುತ್ತದೆ. ಲಯಬಿಲಿಟಿ ಓನ್ಲೀ ಕವರ್ ಆ್ಯಕ್ಟ್ ಓನ್ಲೀ ಕವರ್ ಎಂದೂ ಪರಿಚಿತವಿದೆ.

**ಪ್ರ : ಪ್ರೀಮಿಯಂನ್ನು ಹೇಗೆ ನಿರ್ಧರಿಸಲಾಗುತ್ತದೆ ?**

ಉ : ಅನೇಕ ಅಂಶಗಳು ನೀವು ಸಂದಾಯ ಮಾಡುವ ಪ್ರೀಮಿಯಂನ್ನು ನಿರ್ಧರಿಸುತ್ತವೆ. ಸ್ವಂತ ಹಾನಿಯ ಕವರ್‌ಗಾಗಿ ಬೇರೆ ಬೇರೆ ವಿಮಾ ಕಂಪೆನಿಗಳು ಅದೇ ಕವರೇಜ್‌ಗೆ ಬೇರೆ ಬೇರೆ ಪ್ರೀಮಿಯಂಗಳನ್ನು ವಿಧಿಸುತ್ತವೆ. ಬೇರೆ ಕಡೆ ನೋಡಿರಿ; ಎರಡು ಮೂರು ಕಡೆ ವಿಚಾರಿಸಿ ತಲನೆ ಮಾಡಿ ನೋಡುವುದು ಉತ್ತಮ. ಬೇರೆ ಬೇರೆ ಇನ್‌ಶೂರರ ವೆಬ್‌ಸೈಟ್‌ಗಳನ್ನು ನೋಡಿರಿ; ಪ್ರೀಮಿಯಂಗಳನ್ನು ತುಲನೆ ಮಾಡಲು ಅದರಿಂದ ನಿಮಗೆ ಸಹಾಯವಾಗುತ್ತದೆ. ಕಡಿತಗಳನ್ನು ಕವರೇಜ್ ಮತ್ತು ಪ್ರೀಮಿಯಂ ಆಗಿ ಐಡಿವಿಗಳನ್ನು ತುಲನೆ ಮಾಡಲು ಮರೆಯಬೇಡಿ. ಏಕೆಂದರೆ ಓರ್ವ ಇನ್‌ಶೂರರ ಪ್ರೀಮಿಯಂ ಕಡಿಮೆ ಇರಬಹುದು ಆದರೆ ಕಡಿತಗಳು ಅಧಿಕವಿದ್ದು

ಕಡಿಮೆ ಕವರೇಜ್ ಮತ್ತು ಕಡಿಮೆ ಐಡಿವಿ ಇರಬಹುದಾಗಿದ್ದು, ಇವು ನಿಮ್ಮ ದಾವೆಯ ತೀರಿಕೆಯ ಸಂದರ್ಭದಲ್ಲಿ ನಿಮ್ಮ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾವಬಹುದು.

ನಿಮ್ಮ ಪ್ರೀಮಿಯಂನ್ನು ನಿರ್ಧರಿಸಲು ಸಾಮಾನ್ಯವಾಗಿ ಉಪಯೋಗಿಸಲಾಗುವ ಈ ಕೆಳಗಿನ ಸಂಗತಿಗಳ ಬಗ್ಗೆ ನಿಮ್ಮ ಏಜೆಂಟರಿಗೆ ಮಾಹಿತಿ ನೀಡಲು ತಯಾರಾಗಿರಿ : ವಾಹನದ ಇಂಜಿನ್ ನಂ; ಚಾಸಿಸ್ ನಂ. ವಾಹನದ ಕ್ಲಾಸ್, ಕ್ಯೂಬಿಕ್ ಕ್ಷಮತೆ, ಆಸನದ ಕ್ಷಮತೆ ಇತ್ಯಾದಿ (ವಾಸ್ತವವಾಗಿ ಸಂಬಂಧಿತ ಎಲ್ಲಾ ವಿವಗಳು) ಆರ್‌ಸಿ ಪುಸ್ತಕ/ಕಾರ್ಡ್‌ನಲ್ಲಿರುತ್ತದೆ ಮತ್ತು ಅದರ ಒಂದು ಪ್ರತಿಯನ್ನು ಹಸ್ತಾಂತರಿಸಬಹುದು). ಕರ ಪಾವತಿಸಿದ ವಿವರಗಳು, ಸರ್ಟಿಫಿಕೇಟ್ ಆಫ್ ಫಿಟ್‌ನೆಸ್, ಚಾಲಕರ ವಿವರಗಳು ವಯಸ್ಸು ಲಿಂಗ, ಶಿಕ್ಷಣ ಲೈಸನ್ಸ್‌ನ ಊರ್ಜಿತತೆ, ಹಿಂದಿನ ವಿಮಾ ಹಿನ್ನೆಲೆ, ಒಂದು ವೇಳೆ ಇದ್ದರೆ.

ಸ್ವಂತ ಹಾನಿ ಕವರೇಜ್‌ನ್ನು ಇನ್‌ಶೂರೆನ್ಸ್ ರೆಗ್ಯುಲೇಟರಿ ಆಂಟ್ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ರೇಟ್‌ಗಳನ್ನು ಫೈಲ್ ಮಾಡಿದ ನಂತರ ಆಯಾಯ ವಿಮಾ ಕಂಪೆನಿಗಳಿಗೆ ರೇಟ್ ಮಾಡಲು ಬಿಡಲಾಗುತ್ತದೆ. ಅದನ್ನು ಇತರವುಗಳೊಂದಿಗೆ ಈ ಕೆಳಗಿನ ಅಂಶಗಳಿಂದ ನಿರ್ಧರಿಸಲಾಗುತ್ತದೆ - ವಾಹನದ ವಯಸ್ಸು, ಡಿಸ್ಕೌಂಟ್‌ಗಳು/ಲೋಡಿಂಗ್‌ಗಳು ಪ್ರೀಮಿಯಂನ್ನು ಲೆಕ್ಕ ಮಾಡುವಾಗ ಸೂಕ್ತ ಬೋನಸ್/ ಲೋಡಿಂಗ್/ದಾವೆಯ ಅನುಭವದೊಂದಿಗೆ ಡಿಸ್ಕೌಂಟ್‌ನ್ನು ಪರಿಗಣಿಸಲಾಗುತ್ತದೆ. ಐಡಿವಿ (ಇನ್‌ಶೂಡ್ ಡಿಕ್ಲೇರ್ಡ್ ವ್ಯಾಲ್ಯೂ).

ಮೂರನೇ ಪಾರ್ಟಿ ಬಾಧ್ಯತೆಯ ಪ್ರೀಮಿಯಂ ದರಗಳನ್ನು ಐಆರ್‌ಡಿಎಯಿಂದ ನಿಗದಿಗೊಳಿಸಲಾಗುತ್ತದೆ.

ವಿಮೆಯಲ್ಲಿ ತಡೆ ಉಂಟಾದರೆ, ವಾಹನವನ್ನು ಪರೀಕ್ಷಿಸಬೇಕಾಗುತ್ತದೆ



ಸಲ್ಪಟ್ಟಿದ್ದರೆ ಝೋನ್ ಎ ಗೆ ಅನ್ವಯವಾಗುವ ದರವನ್ನು ವಿಧಿಸಲಾಗುತ್ತದೆ. ನೀವು ಬೇರೆ ನಗರ/ಪಟ್ಟಣಕ್ಕೆ ವರ್ಗಾವಣೆ ಗೊಂಡರೂ ಅದೇ ದರವು ಅನ್ವಯವಾಗುವುದು ಮುಂದು ವರಿಯುತ್ತದೆ. ಅಂತೆಯೇ, ಒಂದು ವಾಹನವು ಪಟ್ಟಣವೊಂದರಲ್ಲಿ ನೋಂದಾಯಿಸಲ್ಪಟ್ಟರೆ ಅದಕ್ಕೆ ಝೋನ್ ಬಿ ಯ ಪ್ರೀಮಿಯಂ ದರ ಅನ್ವಯವಾಗುತ್ತದೆ. ನಂತರ ಮಾಲೀಕರು ಮಹಾನಗರಕ್ಕೆ ವರ್ಗಾವಣೆಗೊಂಡರೂ ಅವರಿಗೆ ಝೋನ್ ಬಿಯ ದರವನ್ನು ಅನ್ವಯಿಸುವುದು ಮುಂದುವರಿಯುತ್ತದೆ.

ಪ್ರ : **ಮೋಟರ್ ವಾಹನ ಕಾಯ್ದೆಯಡಿಯಲ್ಲಿ ಸರ್ಟಿಫಿಕೇಟ್ ಆಫ್ ಇನ್‌ಶೂರೆನ್ಸ್ ಏನಿದೆ ?**

ಉ : ಸೆಂಟ್ರಲ್ ಮೋಟರ್ ವೆಹಿಕಲ್ ರೂಲ್ಸ್ 1989 ರ ನಿಯಮ 141 ರಂತೆ ಸರ್ಟಿಫಿಕೇಟ್ ಆಫ್ ಇನ್‌ಶೂರೆನ್ಸ್‌ನ್ನು ಕೇವಲ ಫಾರ್ಮ್ 51 ರಲ್ಲಿ ಮಾತ್ರ ನೀಡಬೇಕು. ಪಾಲಿಯಲ್ಲಿ ಮಾತ್ರವಲ್ಲದೆ, ಕೇವಲ ಮೋಟರ್ ವೆಹಿಕಲ್ ಇನ್‌ಶೂರೆನ್ಸ್ ನಲ್ಲಿ ಮಾತ್ರ ಕಾನೂನಿನಂತೆ ಇನ್‌ಶೂರರು ಪ್ರತ್ಯೇಕ ಸರ್ಟಿಫಿಕೇಟ್ ಆಫ್ ಇನ್‌ಶೂರೆನ್ಸ್‌ನ್ನು ನೀಡಬೇಕುಂ ಈ ದಸ್ತಾವೇಜನ್ನು ಯಾವಾಗಲೂ ವಾಹನದ ಜೊತೆಯಲ್ಲಿ, ಇರಿಸಿಕೊಳ್ಳಬೇಕು. ಪಾಲಿಸಿಯನ್ನು ಪ್ರತ್ಯೇಕವಾಗಿ ಮನೆ/ಕಚೇರಿಯಲ್ಲಿ ಜೋಪಾನವಾಗಿರಿಸಿ ಇಡಬೇಕು.

ಪ್ರ : **ನಾನು ನನ್ನ ವಾಹನದಲ್ಲಿ ಸಿಎನ್‌ಜಿ ಅಥವಾ ಎಲ್‌ಪಿಜಿ ಕಿಟ್‌ನ್ನು ತಾಗಿಸಿದರೆ, ವಿಮಾ ಕಂಪೆನಿಗೆ ತಿಳಿಸುವುದು ಆವಶ್ಯಕವೇ ?**

ಉ : ವಾಹನಕ್ಕೆ ಸಿಎನ್‌ಜಿ/ಎಲ್‌ಪಿಜಿಯನ್ನು ತಾಗಿಸಿದರೆ, ನೋಂದಾವಣೆ ಸರ್ಟಿಫಿಕೇಟಿನಲ್ಲಿ (ಆರ್‌ಸಿ) ಬದಲಾವಣೆಯನ್ನು ನಮೂದಿಸಲು ವಾಹನವನ್ನು ಎಲ್ಲಿ ನೋಂದಾಯಿಸಲಾಗಿದೆಯೊ ಅಲ್ಲಿನ

**ಪ್ರ: ಕಡಿತಗಳಾವುವು ?**

ಉ: ಕಡಿತಗಳು ಅಥವಾ ''ಹೆಚ್ಚುವರಿಗಳು'' ದಾವೆಯನ್ನು ಪಾವತಿಸುವುದಕ್ಕಿಂತಲ್ಲೂ ಹೆಚ್ಚಿನ ಮೊತ್ತವಾಗಿದೆ. ಹೆಚ್ಚಿನ ವಾಹನಗಳಿಗೆ ದ್ವಿಚಕ್ರ ವಾಹನಗಳ ಸಲುವಾಗಿ ರೂ. 50 ರಿಂದ ಖಾಸಗಿ ಕಾರು ಮತ್ತು ವಾಣಿಜ್ಯ ವಾಹನಗಳಿಗಾಗಿ ರೂ. 500ರ ತನಕ ಸಾಮಾನ್ಯ ಸ್ಟ್ಯಾಂಡರ್ಡ್/ಕಡ್ಡಾಯ ಹೆಚ್ಚುವರಿಗಳಿದ್ದು ವಾಹನದ ಕ್ಯೂಬಿಕ್ ಕ್ಷಮತೆ/ಸಾಗಾಣಿಕೆ ಕ್ಷಮತೆಯನ್ನು ಅವಲಂಬಿಸಿ ಹೆಚ್ಚುತ್ತವೆ. ಆದರೆ, ಕೆಲವು ಪ್ರಸಂಗಗಲ್ಲಿ ವಾಹನದ ವಯಸ್ಸನ್ನು ಅವಲಂಬಿಸಿ ಅಥವಾ ದಾವೆಯ ಅಧಿಕ ಆವರ್ತನಗಳಿದ್ದರೆ ಇನ್‌ಶೂರರು ಹೆಚ್ಚುವರಿ ಹೆಚ್ಚಳವನ್ನು ವಿಧಿಸಬಹುದು.

**ಪ್ರ: ಪಾಲಿಸಿಯಲ್ಲಿನ ಯಾವುದೇ ಬದಲಾವಣೆಗಳನ್ನು ದಾಖಲಿಸುವ ಕಾರ್ಯವಿಧಿಗಳಾವುವು ?**

ಉ: ಪಾಲಿಸಿಯಲ್ಲಿ ಯಾವುದೇ ಬದಲಾವಣೆಗಳಿದ್ದರೆ ವಿಮಾ ಕಚೇರಿಯಿಂದ ಎಂಡೋರ್ಸ್‌ಮೆಂಟ್‌ನ ಮೂಲಕ ಅದನ್ನು ಮಾಡಲಾಗುತ್ತದೆ. ಬವಲಾವಣೆಗಳ ಪುರಾವೆಯೊಂದಿಗೆ ಇನ್‌ಶೂರರಿಗೆ ಒಂದು ಪತ್ರವನ್ನು ಬರೆಯಿರಿ ಮತ್ತು ಎಂಡೋರ್ಸ್‌ಮೆಂಟನ್ನು ಪಡೆಯಿರಿ. ಎಂಡೋರ್ಸ್‌ಮೆಂಟ್ ಸರಿಯಾಗಿದೆ ಎಂಬುದನ್ನು ಪರೀಕ್ಷಿಸಿಕೊಳ್ಳಿರಿ.

**ಪ್ರ: ನಾನು ಒಂದು ನಿರ್ದಿಷ್ಟ ನಗರದಲ್ಲಿ ಕಾರನ್ನು ಉಪಯೋಗಿಸುತ್ತಿದ್ದರೆ ಯಾವ ಪ್ರೀಮಿಯಂ ದರವನ್ನು ಅನ್ವಯಿಸಲಾಗುತ್ತದೆ ?**

ಉ: ಪ್ರೀಮಿಯಂ ದರವನ್ನು ಅನ್ವಯಿಸುವ ಉದ್ದೇಶಕ್ಕಾಗಿ, ವಾಹನವನ್ನು ನೋಂದಾಯಿಸಿಕೊಂಡ ಜಾಗವನ್ನು ಪರಿಗಣಿಸಲಾಗುತ್ತದೆ (ವಾಹನವನ್ನು ಎಲ್ಲಿ ಉಪಯೋಗಿಸಲಾಗುತ್ತಿದೆಯೋ ಅದನ್ನಲ್ಲ). ಒಂದು ವೇಳೆ ನಿಮ್ಮ ವಾಹನವು ಚೆನ್ನೈಯಲ್ಲಿ ನೋಂದಾಯಿ



ಮತ್ತು ಆ ಸಲುವಾಗಿ ಹೆಚ್ಚುವರಿ ವೆಚ್ಚಗಳನ್ನು ಮಾಡಬೇಕಾಗುತ್ತದೆ.

**ಪ್ರ: ಯಾವ ಸುರಕ್ಷಾ ಮಿತಿಯು ನನ್ನ ಆವಶ್ಯಕತೆಗಳನ್ನು ಪೂರೈಸುತ್ತದೆ ?**

ಉ: ಸ್ವಂತ ಹಾನಿಗಾಗಿ ವಾಹನದ ವಿಮಾ ಮೊತ್ತವನ್ನು ''ಇನ್‌ಶೂರ್ಡ್ ಡಿಕ್ಲೇರ್ಡ್ ವ್ಯಾಲ್ಯೂ'' ಎಂದು ಕರೆಯಲಾಗುತ್ತದೆ ಮತ್ತು ವಾಹನದ ಪ್ರಸಕ್ತ ಮಾರುಕಟ್ಟೆ ಬೆಲೆಯನ್ನು ದರ್ಶಿಸುತ್ತದೆ. ಮೂರನೇ ಪಾರ್ಟಿ ಬಾಧ್ಯತೆಯ ಸುರಕ್ಷೆಗಾಗಿ ಮೂರನೇ ಪಾರ್ಟಿಯ ಹಾನಿಗಾಗಿ ಮಿತಿರಹಿತ ಸುರಕ್ಷೆ ಇದೆ, ಆದಾಗ್ಯೂ, ಮೂರನೇ ಪಾರ್ಟಿಯ ಆಸ್ತಿಯ ಹಾನಿಯು ರೂ. 7,50,000 ಮೊತ್ತದ ತನಕ ಸುರಕ್ಷೆಯನ್ನು ಹೊಂದಿದೆ. ವಿಮೆ ಮಾಡಿಸಿಕೊಂಡವರಿಗೆ ಮೂರನೇ ಪಾರ್ಟಿಯ ಆಸ್ತಿಯ ಹಾನಿಯ ಸುರಕ್ಷೆಯನ್ನು ರೂ. 6000 ಕ್ಕೆ ಮಿತಿಗೊಳಿಸುವ ಆಯ್ಕೆ ಹೊಂದಿದ್ದು ಆಗ ''ಲಯಬಿಲಿಟಿ ಓನ್ಲೀ'' ಪ್ರೀಮಿಯಂನಲ್ಲಿ ಇಳಿತವಾಗುತ್ತದೆ.

**ಪ್ರ: ಪಾಲಿಸಿಯ ಅವಧಿ ಎಷ್ಟಿರುತ್ತದೆ ?**

ಉ: ಪಾಲಿಸಿಯು ಸಾಮಾನ್ಯವಾಗಿ ಒಂದು ವರ್ಷದ ತನಕ ಊರ್ಜಿತವಾಗಿರುತ್ತದೆ ಮತ್ತು ಅಂತಿಮ ತಾರೀಖಿನ ಮೊದಲು ನವೀಕರಿಸಬೇಕು. ಪ್ರೀಮಿಯಂನ್ನು ಸಮಯಕ್ಕೆ ಸರಿಯಾಗಿ ಸಂದಾಯ ಮಾಡಿರಿ. ಸಂದಾಯ ತಾರೀಖು ಸಂದಾಯ ತಾರೀಖು ಆಗಿರುತ್ತದೆ. ಒಂದು ದಿನದ ಸಲುವಾಗಿಯೂ ಪಾಲಿಸಿಯು ರದ್ದಾದರೂ, ವಾಹನವನ್ನು ಪರೀಕ್ಷಿಸಬೇಕಾಗುತ್ತದೆ ಅಲ್ಲದೆ ಕಾಂಪ್ರಹೆನ್ಸಿವ್ ಪಾಲಿಸಿಯನ್ನು 90ಕ್ಕೂ ಅಧಿಕ ದಿನಗಳ ತನಕ ರದ್ದಾಗಲು ಬಿಟ್ಟರೆ, ಎನ್‌ಸಿಬಿ (ನೋಕ್ಲೈಮ್ ಬೋನಸ್)ನ ಲಾಭವೂ ಕಳೆದು ಹೋಗುತ್ತದೆ.

**ಪ್ರ: ''ನೊ ಕ್ಲೈಮ್ ಬೋನಸ್'' ಎಂದರೇನು ?**

ಉ: ನೋಕ್ಲೈಮ್ ಬೋನಸ್ (ಎನ್‌ಸಿಬಿ) ಹಿಂದಿನ ಪಾಲಿಸಿ ವರ್ಷದಲ್ಲಿ

ಯಾವುದೇ ದಾವೆ ಮಾಡದಿರುವುದರ ಸಲುವಾಗಿ ಸಂಚಯಿತ ಲಾಭವಾಗಿದೆ. ಪ್ರಸಕ್ತ ನೀತಿಯಂತೆ ಇದು ಸ್ವಂತ ಹಾನಿ ಪ್ರೀಮಿಯಂನ ಮೇಲೆ (ಲಯಬಿಲಿಟಿ ಪ್ರಿಮಿಯಂನ ಮೇಲಲ್ಲ) 20% ರಿಂದ ಹಿಡಿದು ಹೆಚ್ಚುತ್ತಾ ಹೋಗಿ ನಿರಂತರ ದಾವೆ ಮುಕ್ತ ವರ್ಷದ ಆಧಾರದಲ್ಲಿ ಗರಿಷ್ಠ 50% ತನಕ ಏರುತ್ತದೆ. ಆದರೆ ಒಂದು ದಾವೆಯನ್ನು ಸಲ್ಲಿಸಲಾದರೆ, ನಂತರದ ಪಾಲಿಸಿ ವರ್ಷಗಳಲ್ಲಿ ನೋ ಕ್ಲೈಮ್ ಬೋನಸ್ ನಷ್ಟವಾಗುತ್ತದೆ ಎನ್‌ಸಿಬಿಯನ್ನು ವಿಮೆ ಮಾಡಿಸಿಕೊಂಡವರಿಗೆ ನೀಡಲಾಗುತ್ತದೆಯಲ್ಲದೆ ವಿಮೆ ಮಾಡಲಾದ ವಾಹನಕ್ಕಲ್ಲ. ಆದ್ದರಿಂದ ವಾಹನವನ್ನು ವರ್ಗಾಯಿಸಿದಲ್ಲಿ, ವಿಮಾ ಪಾಲಿಸಿಯನ್ನು ಹೊಸ ಮಾಲೀಕರಿಗೆ ವರ್ಗಾಯಿಸಬಹುದು ಆದರೆ ಎನ್‌ಸಿಬಿಯನ್ನಲ್ಲ. ಹೊಸ ಮಾಲೀಕರು ಬಾಕಿ ಪಾಲಿಸಿ ಅವಧಿಗಾಗಿ ಎನ್‌ಸಿಬಿಗಾಗಿ ವ್ಯತ್ಯಾಸವನ್ನು ಪಾವತಿಸಬೇಕು. ಆದರೆ, ಮೂಲ ಮಾಲೀಕರು ಅವರು ಖರೀದಿಸಿದ ಹೊಸ ವಾಹನದ ಮೇಲೆ ಎನ್‌ಸಿಬಿಯನ್ನು ಉಪಯೋಗಿಸಬಹುದು.

ಪ್ರ : **ನಾನು ನನ್ನು ವಿಮಾ ಕಂಪೆನಿಯನ್ನು ಬದಲಾಯಿಸಲು ಇಚ್ಛಿಸಿದರೆ, ನನ್ನ ನೋ ಕ್ಲೈಮ್ ಬೋನಸ್ ವರ್ಗಾಯಿಸಲ್ಪಡುವುದೆ ?**

ಉ : ಹೌದು, ನವೀಕರಿಸುವಾಗ ನೀವು ಇನ್‌ಶೂರರನ್ನು ಬದಲಾಯಿಸಿದರೆ, ನೀವು ಎನ್‌ಸಿಬಿ ಸೌಲಭ್ಯವನ್ನು ಪಡೆಯಬಹುದು. ನೀವು ಸದ್ಯದ ಇನ್‌ಶೂರರರಿಂದ ನವೀಕರಣ ನೋಟೀಸಿನ ಮೂಲಕ ಗಳಿಸಿದ ಎನ್‌ಸಿಬಿಯ ಪುರಾವೆಯನ್ನು ಸಲ್ಲಿಸಬೇಕು. ಒಂದು ವೇಳೆ ಅದನ್ನು ಸಲ್ಲಿಸಲು ಸಾಧ್ಯವಿಲ್ಲದಿದ್ದರೆ, ನೀವು ಮುಕ್ತಾಯವಾಗುವ ನಿಮ್ಮ ಮೂಲ ಪಾಲಿಸಿಯನ್ನು ಸಲ್ಲಿಸಬಹುದಾಗಿದ್ದು ಮುಕ್ತಾಯಗೊಳ್ಳುವ ಪಾಲಿಸಿಯ ಜೊತೆಗೆ ನಿಮ್ಮಿಂದ ಯಾವುದೇ ದಾವೆಯನ್ನು ಸಲ್ಲಿಸಿಲ್ಲ ಎಂಬ ಪ್ರಮಾಣಪತ್ರವನ್ನು ಸಲ್ಲಿಸಬೇಕು. ಆದ್ದರಿಂದ ಪುರಾವೆಯು



ನವೀಕರಣದ ನೋಟೀಸಿನ ರೂಪದಲ್ಲಿರಬಹುದು ಅಥವಾ ಹಿಂದಿನ ಇನ್‌ಶೂರರಿಂದ ಎನ್‌ಸಿಬಿ ಅರ್ಹತೆಯನ್ನು ದೃಢೀಕರಿಸುವ ಒಂದು ಪತ್ರದ ರೂಪದಲ್ಲಿರಬಹುದು.

ಪ್ರ : **ನನ್ನ ಪ್ರೀಮಿಯಂನ್ನು ಕಡಿಮೆ ಮಾಡುವ ಡಿಸ್ಕೌಂಟ್‌ಗಳಿವೆಯೇ ?**

ಉ : ಎನ್‌ಸಿಬಿಯಲ್ಲದೆ ಆಟೊಮೊಬ್ಯಾಲ್ ಅಸೋಸಿಯೇಶನ್ ಆಫ್ ಇಂಡಿಯಾ, ವಿಂಟೇಜ್ ಕಾರ್ಸ್ (ವಿಂಟೇಜ್ ಮತ್ತು ಕ್ಲಾಸಿಕ್ ಕಾರ್‌ಕ್ಲಬ್ ಆಫ್ ಇಂಡಿಯಾದಿಂದ ಪ್ರಮಾಣಿತ ಖಾಸಗೀ ಕಾರುಗಳು) ಸದಸ್ಯತ್ವಕ್ಕಾಗಿ **ಓನ್ ಡ್ಯಾಮೇಜ್ ಪ್ರೀಮಿಯಂನಡಿ,** ಪುಣೆಯ ಆಟೊಮೊಬ್ಯಾಲ್ ರಿಸರ್ಚ್ ಅಸೋಸಿಯೇಶನ್ ಆಫ್ ಇಂಡಿಯಾ (ಎಆರ್‌ಎಐ) ಇವರಿಂದ ಅನುಮೋದಿತವಾಗಿದ್ದು ಎಎಐ ಇವರಿಂದ ಅಳವಡಿಕೆಯು ಅಂಗೀಕೃತಗೊಂಡಿದ್ದರೆ ಹೆಚ್ಚುವರಿ ಡಿಸ್ಕೌಂಟ್‌ಗಳು ಉಪಲಬ್ಧ ಇವೆ; ಅಂಧರಿಗೆ, ಅಂಗವಿಕಲರು ಮತ್ತು ಬುದ್ಧಿ ಮಾಂದ್ಯ ವ್ಯಕ್ತಿಗಳಿಗಳಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಲಾದ ಪರಿವರ್ತಿಸಲಾದ ವಾಹನಗಳಿಗಾಗಿ ರಿಯಾಯಿತಿಗಳಿದ್ದು ಇದು ಆರ್‌ಸಿಯಲ್ಲಿ ಸೂಕ್ತವಾಗಿ ಸಂಬಂಧಿತ ಆರ್‌ಟಿಎಯಿಂದ ಅನುಮೋದಿಸಲ್ಪಟ್ಟಿರಬೇಕು - ಐಚ್ಛಿಕ ಕಡಿತ/ಹೆಚ್ಚುವರಿಗೆ ಆಯ್ಕೆ ಮಾಡುವಂತಹದ್ದು.

''**ಲಯಬಿಲಿಟಿ ಓನ್ಲೀ ವಿಭಾಗ**'' ದಡಿಯಲ್ಲಿ, ಮೂರನೇ ಪಾರ್ಟಿ ಆಸ್ತಿ ಹಾನಿಯಲ್ಲಿ ಕಡಿತಕ್ಕಾಗಿ ಡಿಸ್ಕೌಂಟ್ ಲಭ್ಯವಿದೆ.

(ಟಿಪಿಪಿಡಿ) ರೂ. 750,000 ರಿಂದ ರೂ. 6,000

ಪ್ರ : **ಸೇವಾಕರ ಅನ್ವಯುವಿದೆಯೇ ಮತ್ತು ಅದೆಷ್ಟಿರುತ್ತದೆ ?**

ಉ : ಹೌದು, ಸೇವಾ ಕರವು ಅನ್ವಯವಿದೆ ಮತ್ತು ಪ್ರಸಕ್ತ ಕಾನೂನಿನ ನಿಯಮದಂತೆ ಇರುತ್ತದೆ.